ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.

ಸಿ.ಸಿ.ಸಂಖ್ಯೆ1004/2023

ಫಿರ್ಯಾದುದಾರರು:- ಸರ್ಕಾರದ ಪರವಾಗಿ ಕಡೂರು ಪೊಲೀಸರು

ವಿರುದ್ಧ

ಆರೋಪಿತರು:- ಅಬ್ದುಲ್ ಖಾದರ್ ಮತ್ತು ಇತರರು

ದೋಷಾರೋಪಣೆ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್. ಎಲ್.ಎಲ್.ಬಿ, ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವ:

1. ಅಬ್ದುಲ್ ಖಾದರ್ ಬಿನ್ ಹಯಾತ್ ಸಾಬ್, ಸುಮಾರು 70 ವರ್ಷ,

.2. ಖಲೀಲ್ ಬಿನ್ ಅಬ್ದುಲ್ ಖಾದರ್, ಸುಮಾರು 30 ವರ್ಷ,

3. ಅಜೀಮ್ ಬಿನ್ ಖಾದರ್, ಸುಮಾರು 35 ವರ್ಷ,

ಆರೋಪಿತರೆಲ್ಲರೂ ಕಲ್ಲಾಪುರ ಗ್ರಾಮ, ಕಡೂರು ತಾಲ್ಲೂಕು ವಾಸಿಗಳಾಗಿರುತ್ತಾರೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆ:

ಕಡೂರು ಠಾಣಾ ಸರಹದ್ದಿನ ಕಡೂರು ತಾಲ್ಲೂಕು ಕಲ್ಲಾಪುರ ಗ್ರಾಮದ ಚಾಸಾ-3 ಮೊಹಮ್ಮದ್ ಇಸ್ಮಾಯಿಲ್ ರವರ ಕುರುಬರಹಳ್ಳಿ ಗ್ರಾಮದ ಸ.ನಂ.22/1 ರ ಜಮೀನಿನ ಪಕ್ಕದಲ್ಲಿ 1 ನೇ ಆರೋಪಿಯಾದ ನೀಮ್ಮ ಜಮೀನು ಇದ್ದು, ಸದರಿ ಜಮೀನಿನ ಬದುವಿನ ಬಗ್ಗೆ ನಿಮ್ಮಗಳ ನಡುವೆ ತಕರಾರು ಇರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ : 13.07.2022 ರಂದು ಕಡೂರಿನ ಸರ್ವೆ ಅಧಿಕಾರಿಗಳು ಅಳತೆ ಮಾಡಿ ಚಾಸಾ-3 ರವರಿಗೆ ತಾವು ಅಳತೆ ಮಾಡಿದ ಜಾಗದಲ್ಲಿ ತಂತಿ-ಕಂಬ ಹಾಕಿಕೊಳ್ಳುವಂತೆ ಸೂಚಿಸಿರುತ್ತಾರೆ. ಅದರಂತೆ ದಿನಾಂಕ: 03.07.2022 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಕಡೂರು ಪೋಲೀಸ್ ಠಾಣಾ ವ್ಯಾಪ್ತಿಯ ಕುರುಬರಹಳ್ಳಿ ಗ್ರಾಮದ ಸರ್ವೇ ನಂ.22/1 ರ ಜಮೀನಿಗೆ ತಂತಿ-ಕಂಬ ಹಾಕಲು, ಚಾಸಾ-2 ರಿಯಾಜ್ ರವರು ತನ್ನ ತಂದೆ ಚಾಸಾ-3 ಮೊಹಮ್ಮದ್ ಇಸ್ಮಾಯಿಲ್ ಹಾಗೂ ತನ್ನ ಅಣ್ಣ ಚಾಸಾ-1 ಫಯಾಜ್ ರೊಂದಿಗೆ ಕಬ್ಬಿಣದ ಹಾರೆಯಿಂದ ಗುಡಿ ತೆಗೆಯುತ್ತಿರುವಾಗ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಸೂಳೇ ಮಕ್ಕಳಾ, ಬೋಳಿ ಮಕ್ಕಳಾ ನಿಮ್ಮನ್ನು ಗುಂಡಿ ತೊಡಲು ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ 2 ಮತ್ತು 3 ನೇ ಆರೋಪಿತರಾದ ನೀವು ಕೈಗಳಿಂದ ಚಾಸಾ-2 ರಿಯಾಜ್ ರವರ ಮೈಕೈಗೆ ಹೊಡೆದು ಸ್ವಇಚ್ಛೆಯಿಂದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಹಾರೆಯಿಂದ ಚಾಸಾ-2 ರಿಯಾಜ್ ರವರ ತಲೆಗೆ ಹೊಡೆದು ಸ್ವಇಚ್ಛೆಯಿಂದ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 324 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: **11.03.2025**

-ಸಹಿ-

**(ಸವಿತರಾಣಿ ಹೆಚ್.ವಿ.),**
ಪ್ರಭಾರ ಪ್ರಧಾನ ಪ್ರದನ್ಯಾದಂ ಕಡೂರು.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.

ಸಿ.ಸಿ.ಸಂಖ್ಯೆ:**1004/ 2023**

ಆರೋಪಿ ಸಂಖ್ಯೆ : **3.** ಅಜೀಮ್ ಬಿನ್ ಖಾದರ್, ಸುಮಾರು 35 ವರ್ಷ,
ವಾಸ : ಕಲ್ಲಾಪುರ ಗ್ರಾಮ, ಕಡೂರು ತಾಲ್ಲೂಕು.

ದಂಡ ಪ್ರಕ್ರಿಯಾ ಸಂಹಿತೆ ಕಲಂ **251** ಅಡಿ ಪ್ರಕಾರ ಆರೋಪಿಯ ಹೇಳಿಕೆ:

ಪ್ರ: 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉ: ಹೌದು

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?
ಉ: ನಾವು ಯಾವುದೇ ತಪ್ಪು ಮಾಡಿರುವುದಿಲ್ಲ.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ ಕಡೂರು.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.

ಸಿ.ಸಿ.ಸಂಖ್ಯೆಃ**2980/ 2023**

ಆರೋಪಿ ಸಂಖ್ಯೆ ಃ **2.** 2. ರೇವಣ್ಣ ಬಿನ್ ಸಿದ್ದಪ್ಪ, ಸುಮಾರು 33 ವರ್ಷ, ವಾಸ ಃ ಬಿ ಕೋಡಿಹಳ್ಳಿ, ಬೀರೂರು ಹೋಬಳಿ, ಕಡೂರು ತಾಲ್ಲೂಕು.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **251** ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ ಹೌದು

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ ನಾವು ಯಾವುದೇ ತಪ್ಪು ಮಾಡಿರುವುದಿಲ್ಲ.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ ಕಡೂರು.